ಮರಣಮುಖಿಯಾದ ಮನುಷ್ಯ, ಮುಗ್ಧತೆಯನ್ನು ಪ್ರತಿನಿಧಿಸುವ ಕಥಾಪುಸ್ತಕವನ್ನು ಬರೆಯಬೇಕಾದರೆ ಒಂದು ವಿಚಿತ್ರ ಸ್ಥಿತಪ್ರಜ್ಞತೆ ಇರಬೇಕು. ಇದಕ್ಕೆ ಎಲ್ಲವನ್ನೂ ವ್ಯಾವಹಾರಿಕವಾಗಿ ನೋಡಬಹುದಾದ ವಿಚಿತ್ರ ವ್ಯಾಪಾರಿ ಮನೋಭಾವದ ತಾತ್ವಿಕತೆ ಇರಬೇಕು. ಮರಣಮುಖಿ ಮನುಷ್ಯ ಇದನ್ನು ಮೈಗೂಡಿಸಿಕೊಳ್ಳುವುದು ಸಾಮಾನ್ಯವಲ್ಲ. 2012ರಲ್ಲಿ ರಶ್ದಿ ತಮ್ಮ ಅಜ್ಞಾತವಾಸವನ್ನು 'ಜೋಸೆಫ್ ಆ್ಯಂಟನ್' ಎನ್ನುವ ಪುಸ್ತಕದಲ್ಲಿ ಉತ್ತಮ ಪುರುಷ ನಿರೂಪಣೆಯಲ್ಲಿ ದಾಖಲಿಸಿದರು. ಆದರೆ 1988ರ ಫತ್ವಾದಿಂದ 2012ರ ಕಥನದ ನಡುವಿನಲ್ಲಿ ಅನೇಕ ಕಾದಂಬರಿಗಳನ್ನೂ ಇತರ ಗದ್ಯವನ್ನೂ ಬರೆದರು. ಸಲ್ಮಾನ್ ರಶ್ದಿಯವರ 'ನೈಫ್' ಕೃತಿ ಓದುತ್ತಿದ್ದಂತೆ, ಈ ಮನುಷ್ಯ ತನ್ನೆಲ್ಲ ಅನುಭವಗಳನ್ನು ಅಂತರ್ಗತ ಮಾಡಿಕೊಳ್ಳುತ್ತಿದ್ದರೂ, ಅದರಿಂದ ಯಾವುದೇ ಸಿಟ್ಟು, ವೈಮನಸ್ಸನ್ನು ತೋರದಿರುವುದು ನಿಜಕ್ಕೂ ಅದ್ಭುತ.

ಈ ಪುಸ್ತಕವನ್ನು ಬರೆಯುವಾಗ ರಶ್ದಿ ತಮ್ಮ ವಿಚಾರಗಳನ್ನು ತಮ್ಮದೇ ಬರವಣಿಗೆ ಮತ್ತು ಇತರ ಸಾಹಿತ್ಯದ ಪಕ್ಕದಲ್ಲಿಟ್ಟು ನಿಕಷಕ್ಕೊಡ್ಡುತ್ತಾರೆ. 'ಇಪ್ಪತ್ತು ವರ್ಷಗಳ ಹಿಂದೆ ಬರೆದ 'ಶಾಲಿಮಾರ್ ದ ಕ್ಲೌನ್' ಎನ್ನುವ ಕಾದಂಬರಿ ಪ್ರಾರಂಭವಾಗುವುದು ಒಂದು ಭಿತ್ತಿಯಿಂದ... ನೆಲದ ಮೇಲೆ ಸತ್ತವನ ಶವವಿದೆ. ಎರಡನೆಯ ವ್ಯಕ್ತಿ– ಅವನ ಕೊಲೆಗಾರ- ಎತ್ತರಕ್ಕೆ ನಿಂತು ರಕ್ತಕಾರುತ್ತಿರುವ ಚೂರಿಯನ್ನು ಝಳಪಿಸುತ್ತಿದ್ದಾನೆ'. ಈ ಭಿತ್ತಿಯನ್ನು ಚರ್ಚಿಸುತ್ತಿರುವಾಗಲೇ ಅವರ ವ್ಯಗ್ರ ವ್ಯಂಗ್ಯವೂ ನಮಗೆ ಕಾಣಿಸುತ್ತದೆ. 'ನನ್ನ ಪುಸ್ತಕಗಳಲ್ಲಿ ಭವಿಷ್ಯವಾಣಿಯಿದೆ ಅಂತ ಅನ್ನಿಸುವುದಿಲ್ಲ. ನನ್ನ ಪುಸ್ತಕಗಳಲ್ಲಿ ಪ್ರವಾದಿಯ ಅಂಶಗಳು ಕಾಣುವುದಿಲ್ಲ. ಪ್ರವಾದಿಗಳ ಬಗ್ಗೆ ನನ್ನ ಜೀವನದಲ್ಲಿ ಯಾವಾಗಲೂ ತಕರಾರಿದೆ. ನಾನು ಪ್ರವಾದಿಯ ಕೆಲಸಕ್ಕೆ ಅರ್ಜಿ ಹಾಕುವವನಲ್ಲ' ಎನ್ನುತ್ತಲೇ ಇಲ್ಲಿರುವ ಕಾಕತಾಳೀಯತೆಯನ್ನು ಬೆರಗಿನಿಂದ ನೋಡುತ್ತಾರೆ. ಇದು ಮರುಹುಟ್ಟೇ? ಮರುಹುಟ್ಟು ಪಡೆಯಲು ಮೊದಲಿಗೆ ಸಾಯಬೇಕು ಎಂದು ತಮ್ಮ 'ಸಟಾನಿಕ್ ವರ್ಸಸ್'ನಿಂದ ಉಲ್ಲೇಖಿಸುತ್ತಾರೆ. 'ಸಟಾನಿಕ್ ವರ್ಸಸ್' ಕಾದಂಬರಿಯ ತಥಾಕಥಿತ ಅಪರಾಧದ ಛಾಯೆ ಇನ್ನೂ ಅವರ ಮೇಲೆ ಇದೆ. ಹೀಗಾಗಿಯೇ 2022ರಲ್ಲಿ, 1988ರ ಕಾದಂಬರಿಯ ಫತ್ವಾ ಜಾರಿ ಮಾಡಲು ಒಬ್ಬ ತಲೆತಿರುಕ ಉದ್ಭವಿಸಿದ್ದಾನೆ. 34 ವರ್ಷಕಾಲ ಏನನ್ನೂ ಮರೆಯಲು ಸಾಕಾಗಿರುವ ಸಮಯ. ಆದರೆ ಹಾಗಲ್ಲ. ಸಾವು ರಶ್ದಿಯ ಬೆನ್ನೇರುತ್ತದೆ. ಅವರು ಅದನ್ನು ಗೆದ್ದು, ತನ್ನ ಕಥೆಯನ್ನು ಹೇಳಲು ತಯಾರಾಗಿದ್ದಾರೆ. ಗಾಬ್ರಿಯೇಲ್ ಗಾರ್ಸಿಯಾ ಮಾರ್ಕ್ವಿಜ್‌ನ ಆತ್ಮಕತೆಯ ಹೆಸರು 'ಲಿವಿಂಗ್ ಟು ಟೆಲ್ ದ ಟೇಲ್' – ಅದು ರಶ್ದಿಯವರ ಜೀವನದಲ್ಲಿ ನಿಜವಾಗುತ್ತದೆ. ಕಥೆಯನ್ನು ನಿರೂಪಿಸಲು ಜೀವಂತವಾಗಿರಬೇಕು. ಜೀವಂತವಾಗಿರುವದಷ್ಟೇ ಅಲ್ಲ. ಬರೆಯಲೂ ಆಗಬೇಕು.

'ಈಗ ಹೇಗಿದ್ದೀರಿ?' ಎಂದು ಸಂದರ್ಶಕರೊಬ್ಬರು ಈಚೆಗೆ ಕೇಳಿದ ಪ್ರಶ್ನೆಗೆ, 'ಈ ಹಲ್ಲೆಯಲ್ಲಿ ಒಂದು ಕಣ್ಣನ್ನು ಕಳೆದುಕೊಂಡೆ ಅನ್ನುವುದು ಬಿಟ್ಟರೆ, ಎಲ್ಲವೂ ಸರಿಯಾಗಿಯೇ ಇದೆ' ಅನ್ನುತ್ತಾರೆ. ಒಂದು ಕಣ್ಣನ್ನು ಕಳೆದುಕೊಳ್ಳುವ ತಾಪತ್ರಯಗಳ ಬಗ್ಗೆಯೂ, ಅದರಿಂದ ಸಮಾಧಾನ ಪಡೆದ ರೀತಿಯ ಬಗ್ಗೆಯೂ ರಶ್ದಿ ಬರೆಯುತ್ತಾರೆ. ಒಬ್ಬ ಲೇಖಕ ಹೀಗೆ ತನ್ನ ವಿಧಿಗೆ ಶರಣಾಗಬಹುದೆಂದು ಹೇಗೆ ಯೋಚಿಸಲು ಸಾಧ್ಯ? ಆದರೂ ಅವರ ತರ್ಕವನ್ನು ನೋಡಿ.

ಒಂದು ಕಾರಿನ ಅಪಘಾತದಲ್ಲಿ ಬಲಗಣ್ಣನ್ನು ಕಳೆದುಕೊಂಡ ಟೈಗರ್ ಮನ್ಸೂರ್ ಅಲಿ ಖಾನ್ ಪಟೌಡಿ, ಕ್ರಿಕೆಟ್ ಆಟವನ್ನು ಮುಂದುವರೆಸಿದ್ದಲ್ಲದೇ, ಭಾರತದ ತಂಡದ ಯಶಸ್ವಿ ನಾಯಕರಾಗಿಯೂ ಇದ್ದರು. ವೆಸ್ಟ್ ಇಂಡೀಸ್‌ನ ತೀವ್ರಗತಿಯ ಬೌಲರುಗಳಾದ ವೆಸ್ ಹಾಲ್ ಮತ್ತು ಚಾರ್ಲಿ ಗ್ರಿಫತ್ ಅವರನ್ನು ಎದುರಿಸುವ ಧೈರ್ಯ ಮತ್ತು ಚಾಕಚಕ್ಯತೆ ಟೈಗರ್‌ಗೆ ಇರಬಹುದಾದರೆ ತನ್ನ ಜೀವನ ಹೇಗೆ ದುಸ್ತರವಾಗಬಹುದು ಎನ್ನುತ್ತಾ ರಶ್ದಿ ಆಶಾವಾದದ ಮಾತಾಡುತ್ತಾರೆ.

ಅನೇಕ ಭಾಗಗಳಲ್ಲಿ ಇರಿತಕ್ಕೊಳಗಾಗಿರುವ ದೇಹವನ್ನು ಮರಮ್ಮತ್ತು ಮಾಡುವುದು ಸರಳವಾದ ಮಾತಲ್ಲ. ಅದಕ್ಕಾಗಿ ಎಷ್ಟು ಡಾಕ್ಟರುಗಳು ತಮ್ಮ ಕೌಶಲವನ್ನು ತೊಡಗಿಸಿ, ಕೆಲಸವಾಗುತ್ತಿದ್ದಂತೆಯೇ ಅಲ್ಲಿಂದ ನಾಪತ್ತೆಯಾಗಿಬಿಡುತ್ತಾರೆ. ತೀವ್ರ ನೋವಿನ ನಡುವೆಯೂ ಎಷ್ಟು ಖರ್ಚಾಗುತ್ತಿದೆ ಎನ್ನುವ ಲೌಕಿಕ ಮಾತು, ಅಂದು ಧರಿಸಿದ್ದ ದುಬಾರಿ ರಾಲ್ಫ್ ಲಾರೆನ್ ಕೋಟು ನಷ್ಟವಾದದ್ದು, ಹಲ್ಲೆಗೊಳಗಾದ ಹಲ್ಲನ್ನು ಮರಮ್ಮತ್ತು ಮಾಡಲು ವಿಮೆಯಿಲ್ಲದ ಹದಿನೆಂಟು